**ದಿನಾಂಕಃ 18-10-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ.ಬಿ. ವಕೀಲರಿಂದ**

ನಾನು ವಿದ್ಯಾಬ್ಯಾಸ ಮಾಡಿರುವುದಿಲ್ಲ. ನನ್ನ ಮದುವೆಯಾಗಿ ಸುಮಾರು 40 ವರುಷಗಳಾಗಿರಬಹುದು. ನನ್ನ ಗಂಡನ ಮನೆ ಪಾವಗಡದ ರೊಪ್ಪ ಆಗಿರುತ್ತದೆ. ನನ್ನ ಗಂಡ ಬಂಗಾರಪೇಟೆಯಲ್ಲಿ ನನ್ನನ್ನು ಮದುವೆಯಾಗುವ ಮೊದಲಿನಿಂದಲೂ ಕೆಲಸ ಮಾಡುತ್ತಿದ್ದಾರೆ. ನನ್ನ ಗಂಡ ಬಂಗಾರಪೇಟೆಯಲ್ಲಿ ಸ್ವಂತ ಮನೆ ಕಟ್ಟಿಸಿರುತ್ತಾರೆ. ನನ್ನ ಮದುವೆಯಾದಾಗಿನಿಂದಲೂ ನಾನು ಅಲ್ಲೆ ವಾಸವಾಗಿರುತ್ತೇನೆಂದರೆ ಸರಿ. ರೊಪ್ಪ ಮತ್ತು ಶೈಲಾಪುರದಲ್ಲಿ ನನ್ನದು ಆಧಾರ್ ಕಾರ್ಡು, ಚುನಾವಣಾ ಗುರುತಿನ ಚೀಟಿ , ಪಡಿತರ ಚೀಟಿ ಯಾವುದು ಇರುವುದಿಲ್ಲ. ಒಂದನೇ ಪ್ರತಿವಾದಿಯ ಗಂಡ ಮತ್ತು ಅಣ್ಣ-ತಮ್ಮಂದಿರು ಸೇರಿ ಒಟ್ಟು 5 ಜನ ಇರುತ್ತಾರೆಂದರೆ ಸರಿ. ಅವರುಗಳೆಂದರೆ ನಿಂಗಪ್ಪ, ದೊಡ್ಡನಾಗಪ್ಪ, ಸಣ್ಣನಾಗಪ್ಪ, ಸಿದ್ದಪ್ಪ ಮತ್ತು ಮಲ್ಲಪ್ಪ ಆಗಿರುತ್ತಾರೆ. ಸಿದ್ದಪ್ಪನ ಮಗನೇ ವಾದಿ ಕರಿಯಣ್ಣ ಎಂದರೆ ಸರಿ. ದೊಡ್ಡನಾಗಪ್ಪ ಮತ್ತು ಒಂದನೇ ಪ್ರತಿವಾದಿಗೆ ಮಕ್ಕಳಿರುವುದಿಲ್ಲ ಎಂದರೆ ಸರಿ. ಅವರಿಗೆ ಮಕ್ಕಳಿಲ್ಲದ ಕಾರಣ ವಾದಿಯನ್ನು ಸಾಕಿಕೊಂಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ-1 ಮತ್ತು ಆಕೆಯ ಗಂಡನ ಆರೈಕೆಯನ್ನು ವಾದಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆದ್ದರಿಂದ ಒಂದನೇ ಪ್ರತಿವಾದಿ ತನ್ನ ಗಂಡ ಮೃತರಾದ ನಂತರ ವಾದಿ ಹೆಸರಿನಲ್ಲಿ ದಾವಾ ಆಸ್ತಿಯ ಕುರಿತು ವಿಲ್‌ನಾಮೆಯನ್ನು ಬರೆದಿರುತ್ತಾರೆಂದರೆ ಸರಿಯಲ್ಲ. ಸದರಿ ಸಂಗತಿಗಳೆಲ್ಲಾ ನನಗೆ ತಿಳಿದಿದ್ದರೂ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ವಿಲ್‌ನಾಮೆಯಲ್ಲಿ ಆಸ್ತಿಯು ಯಾವುದೇ ಪ್ರತಿಫಲವಿಲ್ಲದೇ ಹೋಗುತ್ತದೆಂದು ನಾನು ನನ್ನ ಅಕ್ಕನಿಗೆ ಕರಾರುಪತ್ರ ಮಾಡಿಕೊಳ್ಳಲು ಪ್ರೇರೇಪಿಸಿರುತ್ತೇನೆಂದರೆ ಸರಿಯಲ್ಲ. ದಿನಾಂಕಃ 23-08-2011 ರಂದು ನಾನು ನನ್ನ ಅಕ್ಕ ಸೇರಿ ರೂ. 2,00,000-00 ದಾವಾ ಆಸ್ತಿಯನ್ನು ಮಾರಾಟ ಮಾಡಲು ನಿಗಧಿಪಡಿಸಿರುತ್ತೆವೆಂದರೆ ಸರಿಯಲ್ಲ. ವಾದಿಯು ಅದೇ ದಿನದಂದು ಒಂದು ಲಕ್ಷ ಎಂಭತ್ತು ಸಾವಿರ ರೂಪಾಯಿಗಳನ್ನು ಒಂದನೇ ಪ್ರತಿವಾದಿಗೆ ನೀಡಿರುತ್ತಾರೆಂದರೆ ಸರಿಯಲ್ಲ.ಅದೇ ದಿನ ಕರಾರುಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ನನ್ನ ಸಮ್ಮುಖದಲ್ಲಿಯೇ ನನ್ನ ಅಕ್ಕ ಕಂದಾಯ ದಾಖಲೆಗಳು, ನಕಾಶೆಗಳು ಪಡೆದುಕೊಂಡು ಕ್ರಯಪತ್ರ ಮಾಡಿಕೊಡುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಯ ಬೆಲೆ ಹೆಚ್ಚಾದ ಕಾರಣದಿಂದ ದಿನಾಂಕಃ 09-05-2012 ರಂದು ಒಂದನೇ ಪ್ರತಿವಾದಿ ಕಡೆಯಿಂದ ವಾದಿಗೆ ತಿಳಿಯದೆ ದಾನಪತ್ರವನ್ನು ನನಗೆ ಬರೆದಂತೆ ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ. ಸದರಿ ಸೃಷ್ಟಿತ ದಾನಪತ್ರದಲ್ಲಿ ಅದನ್ನು ಬರೆದುಕೊಡುವ ದಿನದಂದು ದಾನಪತ್ರದಲ್ಲಿರುವ ಆಸ್ತಿಯ ವಿಸ್ತೀರ್ಣ 4 ಎಕರೆ ಎಂದು ನಮೂದಾಗಿರುತ್ತದೆ. ದಾನಪತ್ರ ಬರೆದುಕೊಡುವ ದಿನದಂದು ಸರ್ವೆನಂ. 8/8 ಎಂದು ಬದಲಾಗಿರುತ್ತದೆಂದರೆ ಸರಿ. ಸರ್ವೆನಂ. 8 ಮೊದಲಿಗೆ 25 ಎಕರೆ ಹೊಂದಿತ್ತು. ಅದು ಮೊದಲಿಗೆ ಒಂದನೇ ಪ್ರತಿವಾದಿಯ ಮಾವ ಕರಿಯಣ್ಣನ ಹೆಸರಿನಲ್ಲಿತ್ತು ಎಂದರೆ ಸರಿ.

ಎಂ.ಆರ್.ಹೆಚ್. 43/2011-12 ರನ್ನು ನಾನು ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ. ಕರಾರು ಪತ್ರವನ್ನು ಎಷ್ಟು ಬೆಲೆ ಛಾಪಕಾಗದಲ್ಲಿ ಬರೆಯಲಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ.

ಸಾಕ್ಷಿಗೆ ನಿಡಿ-11 ನ್ನು ತೋರಿಸಿದ್ದು ಅದರಲ್ಲಿರುವ ಸಾಕ್ಷಿಗಳ ಸಹಿಯನ್ನು ಗುರುತಿಸಲು ವಿಫಲರಾಗಿರುತ್ತಾರೆ. ದಾನಪತ್ರವನ್ನು ಬರೆಯುವ ಕಾಲಕ್ಕೆ ನಾನು, ನನ್ನ ಅಕ್ಕ ದೊರೆಸ್ವಾಮಿ, ಹನಮಂತರಾಯಪ್ಪ, ಕೃಷ್ಣಮೂರ್ತಿ ಉಪಸ್ಥಿತರಿದ್ದರು. ಹನುಮಂತರಾಯಪ್ಪ ಕರೆಕ್ಯಾತನಹಳ್ಳಿ ಗ್ರಾಮದವರಾಗಿದ್ದು ಅವರ ತಂದೆಯ ಹೆಸರು ಗೊತ್ತಿಲ್ಲ. ಸದರಿ ಹಳ್ಳಿಯಲ್ಲಿ ಹನುಮಂತರಾಯಪ್ಪನವರು 15-20 ಜನ ಇರಬಹುದು. ಹನುಮಂತರಾಯಪ್ಪ ಯಾರೆಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ಸಹಿ ಮಾಡಿರುತ್ತಾರೆಂದು ನುಡಿಯುತ್ತಾರೆ. ನಿಡಿ-11 ರ 4ನೇ ಪುಟದಲ್ಲಿರುವ ಹನುಮಂತರಾಯಪ್ಪ ಎಂಬ ಸಹಿಗೂ 5ನೇ ಪುಟದಲ್ಲಿರುವ ಹನುಮಂತರಾಯಪ್ಪ ಎಂಬ ಸಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ಗುರುತಿಸಲು ವಿಫಲರಾಗಿರುತ್ತಾರೆ. ದೊರೆಸ್ವಾಮಿ ಎಂಬುವರು ಅಜ್ಜಪ್ಪನಹಳ್ಳಿಯ ನಿವಾಸಿಯಾಗಿರುತ್ತಾರೆ. ಸದರಿ ಹಳ್ಳಿಯು ಬಂಗಾರಪೇಟೆ ತಾಲ್ಲೂಕಿನಲ್ಲಿ ಬರುತ್ತದೆ. ದಾನಪತ್ರವನ್ನು ಬರೆಸುವ ದಿನಕ್ಕೆ ದೊರೆಸ್ವಾಮಿ ಖುದ್ದಾಗಿ ಬಂದಿದ್ದರು.ದೊರೆಸ್ವಾಮಿ ಪರಿಚಯ ನನಗೆ ಮದುವೆಯಾದಾಗಿನಿಂದಲೂ ಪರಿಚಯವಿರುತ್ತದೆ. ನಿಡಿ-11 ರಲ್ಲಿ ಹನುಮಂತರಾಯಪ್ಪನ ಹೆಸರು ನಂತರ ಪಾವಗಡ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಅವರು ಪಾವಗಡದಲ್ಲಿರಬಹುದು ಅದಕ್ಕೆ ಪಾವಗಡ ಎಂದು ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ವಾದಿಗೆ ಕ್ರಯಪತ್ರ ಬರೆದು ಕೊಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ ನಾನು ಮತ್ತು ನನ್ನ ಅಕ್ಕ ಸೇರಿಕೊಂಡು ದಾನಪತ್ರವನ್ನು ಸೃಷ್ಟಿಸಿರುತ್ತೇವೆಂದರೆ ಸರಿಯಲ್ಲ.

ದಿನಾಂಕಃ 14-01-2015 ರಂದು ನನಗೂ ಮತ್ತು ಉಪನೋಂದಣಿ ಅಧಿಕಾರಿಗೆ ತಿಳುವಳಿಪತ್ರವನ್ನು ನೀಡಿರುತ್ತಾರೆಂದರೆ ಸರಿ. ಅದಕ್ಕೆ ನಾನು ಯಾವುದೇ ರೀತಿಯ ಜವಾಬು ನೀಡಿರುವುದಿಲ್ಲ.

**(ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲುಗಾಗಿ ಮುಂದೂಡಲಾಯಿತು)**
**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು**)**

**ಓ ಹೇ ಕೇ ಸರಿ ಇದೆ**

**ಎ.ಸಿ.ಜೆ., ಪಾವಗಡ.**